# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 18-12-2021 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು | 1. ಶ್ರೀ ಜಿ.ನಾರಾಯಣಸ್ವಾಮಿ |
| 2. ಡಾ॥ ಸುಕನ್ಯ, ಆರೋಗ್ಯಾಧಿಕಾರಿಗಳು | 2. ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ |
| 3. ಡಾ॥ ವೆಂಕಟೇಶ್ ಆರೋಗ್ಯಾಧಿಕಾರಿಗಳು | 3. ಶ್ರೀ ಕನ್ನಡ ರಾಮು |
| 4. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು | 4. ಶ್ರೀ ಉಮೇಶ್ |
| 5. ಎಸ್.ಚೈತ್ರಾ, ಹಿರಿಯ ಆರೋಗ್ಯ ಪರಿವೀಕ್ಷಕರು | 5. ಶ್ರೀ ಪಿ.ಕಿರೀಟಪ್ಪ |
| 6. ಶ್ರೀ ವಿಜಯರಾಜ್ ಎಸ್, ಕಿರಿಯ ಆರೋಗ್ಯ ಪರಿವೀಕ್ಷಕರು | 6. ಶ್ರೀ. ಸ್ವಾಮಿ |
| 7. ಶ್ರೀ. ಮಹಮದ್ ರೆಹಮತುಲ್ಲಾ, ಕೆಲಸ ಪರಿವೀಕ್ಷಕರು | |
| 8. ಶ್ರೀ. ರಾಜಪ್ಪ ಎಂ.ಎಲ್, ಮಾರ್ಷಲ್ | |
| 9. ಶ್ರೀಮತಿ. ಶಿಲಗವತಿ, ಲಿಂಕ್ ವರ್ಕರ್ | |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆ:-**

ಸಭೆಗೆ ಸಹಾಯಕ ಅಭಿಯಂತರರು ಗೈರು ಹಾಜರಾಗಿರುತ್ತಾರೆ, ಕೆ.ಎಸ್.ಎಫ್.ಸಿ ಲೇಔಟ್‌ನ ವೆಲ್‌ಫೇರ್ ಅಸೋಸಿಯೇಷನ್ ರವರ ಮನವಿಯಲ್ಲಿ ಸದರಿ ವಾರ್ಡ್‌ನಲ್ಲಿ ಇತ್ತೀಚಿನ ಮಳೆಯಿಂದ ರಸ್ತೆಗಳೆಲ್ಲಾ ಹಾಳಾಗಿದ್ದು ರಸ್ತೆ ತುಂಬಾ ಪಾಟ್‌ಹೋಲ್ಸ್‌ಗಳಿದ್ದು ವಾಹನ ಸಂಚಾರರಿಗೆ ತೊಂದರೆಯಾಗುತ್ತಿರುವುದರಿಂದ ಮುಂದಿನ ಸಭೆಯ ಒಳಗಾಗಿ ಎಲ್ಲಾ ರಸ್ತೆ ಗುಂಡಿಗಳನ್ನು ಮುಚ್ಚುವುದು, ಡಾಂಬರೀಕರಣ, ಫುಟ್‌ಪಾತ್‌ಗಳ ರಿಪೇರಿ ಮತ್ತು ಕೆಟ್ಟುಹೋಗಿರುವ ಬೋರ್‌ವೆಲ್‌ಗಳನ್ನು ಸರಿಪಡಿಸಲು ಕೋರಿದ್ದು, ಈ ಬಗ್ಗೆ ವಾರ್ಡ್‌ನ ಸಹಾಯಕ ಅಭಿಯಂತರರು ಕ್ರಮ ವಹಿಸಿರುವುದಿಲ್ಲವೆಂದು ಸಭೆಯಲ್ಲಿ ಸೂಚಿಸಿದರು. ಈ ಸಂಬಂಧ ಸದರಿ ವಾರ್ಡ್‌ನಲ್ಲಿ ಸಹಾಯಕ ಅಭಿಯಂತರರು ಹೆಚ್ಚುವರಿ ಪ್ರಭಾರದ ಮೇಲೆ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿ ವಾರ್ಡ್‌ಗೆ ಒಬ್ಬರು ಸಹಾಯಕ ಅಭಿಯಂತರರನ್ನು ಖಾಯಂ ಆಗಿ ನಿಯೋಜಿಸಲು ಈಗಾಗಲೇ ಪತ್ರ ಬರೆಯಲಾಗಿದ್ದು, ಮತ್ತೊಮ್ಮೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪು.ತಿ.ನೋ

Scanned with CamScanner

**ಘನತ್ಯಾಜ್ಯ ನಿರ್ವಹಣೆ ಬಗ್ಗೆ:-**

ವಾರ್ಡ್ ನಂ.49 ಲಿಂಗರಾಜಪುರದ ಹಿರಿಯ ಆರೋಗ್ಯ ಪರಿವೀಕ್ಷಕರು ಈ ಬಗ್ಗೆ ಮಾತನಾಡುತ್ತಾ, ಸದರಿ ವಾರ್ಡ್‌ನಲ್ಲಿ ಈ ಹಿಂದೆ 37 ಬ್ಲಾಕ್‌ಸ್ಪಾಟ್‌ಗಳಿದ್ದು, ಅದರಲ್ಲಿ ಈಗಾಗಲೇ 34 ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದ್ದು, ಬಾಕಿ ಇರುವ 03 ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದೆ ಹಾಗೂ ಸಾರ್ವಜನಿಕರು ಕಸ ಹಾಕದಂತೆ ತಡೆಯುವ ನಿಟ್ಟಿನಲ್ಲಿ ವಾರ್ಡ್ ಸಮಿತಿ ಸದಸ್ಯರು ಸಹಕಾರ ನೀಡಲು ಮನವಿ ಮಾಡಿರುತ್ತಾರೆ.

ಸದರಿ ವಾರ್ಡ್‌ನಲ್ಲಿ ಒಟ್ಟು 25 ಆಟೋ ಟಿಪ್ಪರ್‌ಗಳು, 02 ಕಾಂಪ್ಯಾಕ್ಟರ್ ಇದ್ದು, ಸದರಿ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ಸಾವಜನಿಕರಿಗೆ ಮಾಹಿತಿ ನೀಡಲು ಟಿಪ್ಪರ್‌ಗಳಲ್ಲಿ ಆಡೀಯೋ ಜಾಹೀರಾತುಗಳನ್ನು ಹಾಕಲಾಗುತ್ತದೆ. 43 ಮಂದಿ ಪಾಲಿಕೆಯ ಪೌರಕಾರ್ಮಿಕರಿದ್ದು, 26 ಮಂದಿ ಗುತ್ತಿಗೆ ಪೌರಕಾರ್ಮಿಕರು ಸೇರಿ ಒಟ್ಟು 69 ಮಂದಿ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ ಘನತ್ಯಾಜ್ಯ ನಿರ್ವಹಣೆ ಕಾರ್ಯ ನಡಯುತ್ತಿರುವುದಾಗಿ ತಿಳಿಸಿದರು.

**ಕೋವಿಡ್-19 ನಿಯಂತ್ರಣದ ಬಗ್ಗೆ:-**

ಡಾ॥ ಸುಕನ್ಯ ರವರು ಈ ಬಗ್ಗೆ ಮಾತನಾಡುತ್ತಾ ಸದರಿ ವಾರ್ಡ್‌ನಲ್ಲಿ 17/12/2021 ರಂದು ಒಂದು ಕೋವಿಡ್ ಪ್ರಕರಣ ಬಂದಿರುತ್ತದೆ.

ಮೊದಲನೇ ಡೋಸ್ ತೆಗೆದುಕೊಂಡವರಿಗೆ 84 ದಿನಗಳ ನಂತರ ಎರಡನೇ ಡೋಸ್ ಹಾಕಲಾಗುತ್ತಿದೆ. ಮೊದಲನೇ ಡೋಸ್ ಪಡೆದುಕೊಂಡು ಎರಡನೇ ಡೋಸ್‌ಗೆ 84 ದಿನಗಳು ಕಳೆದರೂ ಇನ್ನೂ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳದವರಿಗೆ ದೂರವಾಣಿ ಮುಖಾಂತರ ಕರೆ ಮಾಡಿ ಲಸಿಕೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ಸದರಿ ವಾರ್ಡ್‌ನಲ್ಲಿ ಸಾರ್ವಜನಿಕರಿಗೆ ಮಾಸ್ಕ್ ಧರಿಸುವ ಬಗ್ಗೆ, ಸ್ಯಾನಿಟೈಜರ್‌ಗಳ ಉಪಯೋಗದ ಬಗ್ಗೆ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಅರಿವುಮೂಡಿಸಿಲಾಗುತ್ತಿದೆ. ಆದರೂ ಸಾರ್ವಜನಿಕರುಗಳು ಸರಿಯಾಗಿ ಮಾಸ್ಕನ್ನು ಹಾಕುತ್ತಿಲ್ಲ ಅವರುಗಳಿಗೆ ಮಾರ್ಷಲ್‌ಗಳ ಮೂಲಕ ರೂ.250 ರಂತೆ ದಂಡ ವಿಧಿಸಲು ಸದಸ್ಯರು ತಿಳಿಸಿದ ಮೇರೆಗೆ ಈಗಾಗಲೇ ಸದರಿ ವಾರ್ಡ್‌ನಲ್ಲಿ ಮಾರ್ಷಲ್‌ಗಳ ಮೂಲಕ ದಂಡ ವಿಧಿಸಲಾಗುತ್ತಿರುವುದಾಗಿ ಆರೋಗ್ಯ ವೈದ್ಯಾಧಿಕಾರಿಗಳು ತಿಳಿಸಿದರು.

ಸದರಿ ವಾರ್ಡ್‌ನಲ್ಲಿ 56,929 ಜನರಿದ್ದು, ಇದುವರೆಗೆ 73185 ಡೋಸ್ ಕೋವಿಡ್ ನಿಯಂತ್ರಣ ಲಸಿಕೆಯನ್ನು ಹಾಕಲಾಗಿರುತ್ತದೆ. ಈ ಪೈಕಿ ಮೊದಲನೇ ಡೋಸ್ 40594 ಹಾಗೂ 2ನೇ ಡೋಸ್ 32591 ಹಾಕಲಾಗಿರುತ್ತದೆ. ಅಗತ್ಯ ಪ್ರಮಾಣದಲ್ಲಿ ಕೋವಿಡ್ ಲಸಿಕೆ ಇದ್ದು, ಯಾವುದೇ ಕೊರತೆ ಇರುವುದಿಲ್ಲ. ಈ ವಾರ್ಡ್ ವ್ಯಾಪ್ತಿಯಲ್ಲಿ ಇದುವರೆವಿಗೆ 1014 ಕೋವಿಡ್ ಕೇಸ್‌ಗಳು ದಾಖಲಾಗಿದ್ದು, ಒಂದು ಸಕ್ರೀಯ ಪ್ರಕರಣ ಮಾತ್ರ ದಾಖಲಾಗಿರುತ್ತದೆ. ಈ ವಾರ್ಡ್‌ನಲ್ಲಿ ಇಲ್ಲಿಯವರೆವಿಗೆ 57 ಡೆತ್ ಪ್ರಕರಣಗಳು ದಾಖಲಾಗಿರುತ್ತವೆ ತಮ್ಮ ವ್ಯಾಪ್ತಿಯಲ್ಲಿ 15 ಬ್ಲಾಕ್‌ಗಳಿದ್ದು, ಮನೆ ಮನೆ ಸರ್ವೆ ಮಾಡಿ ವ್ಯಾಕ್ಸಿನೇಷನ್ ಕ್ರಮ ಕೈಗೊಳ್ಳಲಾಗಿರುತ್ತದೆ. 18 ವರ್ಷಗಳಿಗಿಂತ ಕೆಳಗಿನ ವಯಸ್ಕರಿಗೆ ವ್ಯಾಕ್ಸಿನೇಷನ್ ನೀಡುವ ಬಗ್ಗೆ ಹಾಗೂ ಬೂಸ್ಟರ್ ಡೋಸ್ ಬಗ್ಗೆಯೂ ಸಹ ಸರ್ಕಾರದಿಂದ ಇನ್ನೂ ಮಾಹತಿ ಬಂದಿಲ್ಲವೆಂದು ವಾರ್ಡ್‌ನ ಆರೋಗ್ಯಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಪು.ತಿ.ನೋ.,

Scanned with CamScanner

ಸದರಿ ವಾರ್ಡ್‌ನಲ್ಲಿ ಒಮಿಕ್ರಾನ್ ವೈರಾಣು ಪ್ರಕರಣ ಯಾವುದೂ ಬಂದಿಲ್ಲವೆಂದು ಹಾಗೂ ಈ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಯಲ್ಲಿ ವಾರ್ಡ್‌ನ ಆರೋಗ್ಯಾಧಿಕಾರಿಗಳು ತಿಳಿಸಿದರು.

ದಿವ್ಯ ಶಾಂತಿ ಹೆಲ್ತ್ ಸೆಂಟರ್ ಮತ್ತು ಸಾರ್ವಜನಿಕ ಪ್ರಾಥಮಿಕ ಚಿಕಿತ್ಸಾ ಕೇಂದ್ರ ಮತ್ತು 2 ಮೊಬೈಲ್ ತಂಡಗಳಲ್ಲಿ ಕೋವಿಡ್ ಲಸಿಕೆಗಳನ್ನು ಹಾಕಲಾಗುತ್ತಿದೆ. ಅದೇ ರೀತಿ ಚರ್ಚ್, ಡಾನ್ ಬಾಸ್ಕೋ, ಶಾಲಾ-ಕಾಲೇಜ್‌ಗಳಲ್ಲಿ, ಮತ್ತು ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಂಪ್ ಮಾಡಿ ಕೋವಿಡ್ ಲಸಿಕೆಗಳನ್ನು ಹಾಕಲಾಗುತ್ತಿದೆ.

ಮತ್ತು ಪೌರಕಾರ್ಮಿಕರುಗಳಿಗೆ ಕೋವಿಡ್ ಲಸಿಕೆ ಪಡೆದಿರುವ ಬಗ್ಗೆ ಕೋವಿಡ್ ಲಸಿಕೆ ಪ್ರಮಾಣ ಪತ್ರ ನೀಡಲು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು, ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೆ ಹಾಗೂ ಸಿಬ್ಬಂದಿಗಳಿಗೆ ಪ್ರತಿ ಮಾಹೆ ಜನರಲ್ ಮೆಡಿಕಲ್ ಚೆಕಪ್ ಮಾಡುತ್ತಿರುವುದಾಗಿ ಆರೋಗ್ಯ ಸಿಬ್ಬಂದಿ ತಿಳಿಸಿದರು.

ಸದರಿ ವಾರ್ಡ್‌ನಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮ ಇರುವ ದಿನಾಂಕ ಹಾಗೂ ಸ್ಥಳದ ವಿವರಗಳೊಂದಿಗೆ Group Whats app ನಲ್ಲಿ ಹಂಚಿಕೊಳ್ಳಲು ಸಂಬಂಧಪಟ್ಟ ಆರೋಗ್ಯವೈದ್ಯಾಧಿಕಾರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಕೋವಿಡ್-19 ನಿಂದ ಮೃತಪಟ್ಟವರ ಅವಲಂಬಿತರಿಗೆ ಸರ್ಕಾರದಿಂದ ಪರಿಹಾರ ಧನವನ್ನು ಬಿಪಿಎಲ್‌ದಾರರಿಗೆ ರೂ.1,50,000/- ಎಪಿಎಲ್‌ದಾರರಿಗೆ ರೂ.50,000/- ಘೋಷಿಸಿದ್ದು, ಅದರಂತೆ ಸದರಿ ವಾರ್ಡ್‌ನಲ್ಲಿ 57 ಜನ ಕೋವಿಡ್ ನಿಂದ ಮೃತಪಟ್ಟಿದ್ದು, ಈ ಪೈಕಿ 52 ಜನರ ಅವಲಂಬಿತರಿಂದ ಅರ್ಜಿಗಳನ್ನು ಪಡೆಯಲಾಗಿದ್ದು, ಉಳಿಕೆ ಅರ್ಜಿಗಳನ್ನು ಪಡೆದು ಅಗತ್ಯ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಿದರು.

**ಬೀದಿ ದೀಪ ನಿರ್ವಹಣೆ ಕುರಿತು:-**

ಗುತ್ತಿಗೆದಾರರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ, ಮೊಬೈಲ್ ಪೋನ್ ರಿಸೀವ್ ಮಾಡುತ್ತಿಲ್ಲ, ಸಹಾಯ ಅಭಿಯಂತರರು (ವಿದ್ಯುತ್) ರವರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ, ಕೆ.ಎಸ್.ಎಫ್.ಸಿ ಬಡಾವಣೆಯ ಸ್ಮಶಾನದ ಬಳಿ ಹಾಗೂ ಇನ್ನಿತರೆ ಕಡೆ ಬೀದಿ ದೀಪಗಳು ಉರಿಯುತ್ತಿಲ್ಲ ಈ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಕೋರಿದರು.

ಈ ಬಗ್ಗೆ ಪರಿಶೀಲಿಸಿ, ಎಲ್ಲೆಲ್ಲಿ ದೀಪಗಳು ಉರಿಯುತ್ತಿಲ್ಲವೋ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ವಿದ್ಯುತ್ ಗುತ್ತಿಗೆದಾರರಿಗೆ ಹಾಗೂ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರಿಗೆ ತಿಳಿಸಲು ಸದಸ್ಯ ಕಾರ್ಯದರ್ಶಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಪು.ತಿ.ನೋ,

Scanned with CamScanner

**ಬೆಸ್ಕಾಂ:-**

ವಾರ್ಡ್ ಕಛೇರಿಯ ವಿದ್ಯುತ್ ಕನೆಕ್ಷನ್ ತೆಗೆದು ಹಾಕಿದ್ದು, ಈಗಾಗಲೇ ಬಿಲ್ ಪಾವತಿಯಾಗಿದ್ದರೂ ಸಹ ವಿದ್ಯುತ್ ಕನೆಕ್ಷನ್ ಕಟ್ ಮಾಡಿರುತ್ತಾರೆಂದು ವಾರ್ಡ್ ಕಛೇರಿ ಸಿಬ್ಬಂದಿ ತಿಳಿಸಿದರು ಇದಕ್ಕೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಈ ಬಗ್ಗೆ ಜರೂರಾಗಿ ಸೂಕ್ತ ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಸಿದರು.

ಸದರಿ ವಾರ್ಡ್‌ನಲ್ಲಿ ರಸ್ತೆ ಅಗೆದಿರುವುದನ್ನು ಸರಿಪಡಿಸಿರುವುದಿಲ್ಲವೆಂದು ಸಮಿತಿ ಸದಸ್ಯರು ದೂರಿದ್ದು, ಅದನ್ನು ಮುಂದಿನ ಸಭೆಯೊಳಗಾಗಿ ಸರಿ ಪಡಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

**ಕಲ್ಯಾಣ ಶಾಖೆ:-**

ಟೈಲರಿಂಗ್ ಟೀಚರ್ ಮಾತನಾಡುತ್ತಾ, ಅಂಗವಿಕಲರಿಗೆ ಈಗಾಗಲೇ ವಾಹನಗಳನ್ನು ವಿತರಿಸಲಾಗಿದೆ, ಟೈಲರಿಂಗ್ ಮಷೀನ್‌ಗಳನ್ನು ವಿತರಿಸಲಾಗಿದೆ, ಲ್ಯಾಪ್‌ಟಾಪ್, ನಾಲ್ಕು ಚಕ್ರ ವಾಹನ, ತ್ರಿಚಕ್ರ ವಾಹನಗಳನ್ನು ನೀಡಿರುವುದಿಲ್ಲ, ಹೊಲಿಗೆ ತರಬೇತಿ ಕೇಂದ್ರದ ಅಡ್ಮೀಷನ್ ಪ್ರಾರಂಭವಾಗಿದ್ದು, ಈಗಾಗಲೇ 08 ಮಂದಿ ವಿದ್ಯಾರ್ಥಿಗಳು ಹಾಜರಾಗಿರುವುದಾಗಿ ತಿಳಿಸಿದರು.

**ಬಿಡಬ್ಲ್ಯೂಎಸ್‌ಎಸ್‌ಬಿ:-**

ಸದರಿ ಸಭೆಗೆ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಗೈರು ಹಾಜರಾಗಿರುತ್ತಾರೆ.

ಸಭೆಯು 12-00 ಗಂಟೆಗೆ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

18/12/19
ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

ಪ್ರತಿಯನ್ನು,

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಮಾಹಿತಿಗಾಗಿ ರವಾನಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
7. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
8. ಕಛೇರಿ ಕಡತಕ್ಕೆ.

Scanned with CamScanner